ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ತಾಯಿಗೆ ಮಗಳು ಅಂಗ ಇದ್ದಂತೆ. ತಂದೆಗೆ?



ಮನದ ಸುಂದರ ರಂಗ ಇದ್ದಂತೆ.

ನರಸಿಂಹ ಪೈ, ಕಾಸರಕೋಡ
ನೀರಿನ ಸುಳಿಯಲ್ಲಿ ಸಿಲುಕಿದವನಿಗೂ, ಸಾಲದ ಸುಳಿಯಲ್ಲಿ ಸಿಲುಕಿದವನಿಗೂ ಏನು ವ್ಯತ್ಯಾಸ?
ಅವನು ಉಸಿರು ಕಟ್ಟಬೇಕು; ಇವನು ಹೊಟ್ಟೆ ಕಟ್ಟಬೇಕು.

ಎಸ್.ಎನ್. ಮಹಾಬಲರಾವ್, ಎನ್ನಾರ್‍ಪುರ
ಕಿಟಕಿ ಕೀಟಲೆ ಶುರುವಾಗಿದೆ...?
ಇಷ್ಟವಿದ್ದರೆ ಕಿಟಕಿ ತೆರೆ ಎನ್ನಿ. ಇಲ್ಲವಾದರೆ ಕಿಟಕಿಗೆ ತೆರೆ ತನ್ನಿ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಜಗತ್ತಿನಲ್ಲಿ ಬಹು ತೀಕ್ಷ್ಣವಾದದ್ದು ಯಾವುದು ಸಾರ್?
ತಿರಸ್ಕಾರ.

ಸಿಹಿಮೊಗೆ ರಮೇಶ್, ಮೈಸೂರು
ಹೊಟ್ಟೆ ತುಂಬಾ ತಿನ್ನುವುದಕ್ಕೂ, ಕಂಠಪೂರ್ತಿ ತಿನ್ನುವುದಕ್ಕೂ ವ್ಯತ್ಯಾಸವೇನು?



ರುಚಿಯೇ. ಸಾಧಾರಣ ರುಚಿಯಾದರೆ ಹೊಟ್ಟೆತುಂಬಾ. ರಸಗವಳವಾದರೆ ಕಂಠವಷ್ಟೇ ಅಲ್ಲ, ಮೂಗಿನಮಟ್ಟ!

ಬಿ. ಚಂದ್ರೇಗೌಡ, ಬೆಂಗಳೂರು
ಆರ್ಟ್ ಆಫ್ ಲಿವಿಂಗ್‌ಗೂ, ಆರ್ಟ್ ಆಫ್ ಲವಿಂಗ್‌ಗೂ ಏನು ವ್ಯತ್ಯಾಸ?
ಲಿವಿಂಗ್‌ನದು ಕರ್ಮಣ್ಯೇವಾಧಿಕಾರಸ್ತೇ; ಲವಿಂಗ್‌ನದು ವಸುಧೈವ ಕುಟುಂಬಕಂ ವ್ಯವಸ್ಥೆ.

ರಾಜಶೇಖರ ಹಾದಿಮನಿ, ಧಾರವಾಡ
ಊಹೆಗಳು ಸಂಬಂಧಗಳನ್ನು ಕಬಳಿಸುವ ಗೆದ್ದಲುಗಳಿದ್ದಂತೆ. ಒಪ್ಪುತ್ತೀರಾ ರಾಮ್‌ಜೀ?
ಊಹೆಗಳೇ ಆವಿಷ್ಕಾರಗಳಿಗೂ ಕಾರಣ. ಶಂಕೆ ಮಾತ್ರ ಶಂಖನಾದಕ್ಕೆ ದಾರಿ.

ಸಿ. ಆನಂದಪ್ಪ, ಬೆಂಗಳೂರು
ತೆಂಗಿನಮರ ಡೊಂಕು, ನಾಯಿಬಾಲ ಡೊಂಕು. ಇದು ಯಾವ ಪುಣ್ಯಾತ್ಮನ ಶಾಪ?
ನೇರಮರದ ಕಾಯಿ ಎಟುಕದ ನೆರೆಮನೆಯವನ, ನೇರಬಾಲಕ್ಕಾಗಿ ನಾಯಿಗೂಡು ದೊಡ್ಡದಾಗಿ ಕಟ್ಟಬೇಕಾದವನ ಶಾಪ.

ಅಭಿಷೇಕ ಬೊಂಗಾಳೆ, ಬೈಲಹೊಂಗಲ
ಆಗಿನ ದೇವಾಲಯಕ್ಕೂ ಈಗಿನ ದೇವಾಲಯಕ್ಕೂ ವ್ಯತ್ಯಾಸ?
ಈಗಿನ ದೇವಾಲಯಗಳಲ್ಲಿ ಚಚ್ಚಿಬಡಿಯುವ ಡ್ರಮ್ಮಿನ ಸದ್ದಿಗೆ ದೇವ ನಿದ್ರೆಯಲ್ಲೂ ಬೆಚ್ಚುವನಂತೆ.

ಪಿ. ಜಯವಂತ ಪೈ, ಕುಂದಾಪುರ
ಅಪ್ರಾಪ್ತ ವಯಸ್ಕರು ಎಂಬ ನೆಲೆಯಲ್ಲಿ ಕ್ರಿಮಿನಲ್ ಅಪರಾಧಿಗಳಿಗೆ ವಿನಾಯಿತಿ ಸರಿಯೆ?
ವಯಸ್ಸಿನ ನೆಲೆಯಲ್ಲಿ ಕಾಣದೆ ಮಾನಸಿಕವಾಗಿ ಪ್ರಾಪ್ತನೋ ಅಪ್ರಾಪ್ತನೋ ನಿರ್ಧರಿಸುವುದು ಅಗತ್ಯ.

ಕೆ.ಹೆಚ್.ಆರ್.ಕೆ. ರೆಡ್ಡಿ, ಬೆಂಗಳೂರು
ಅಮಾವಾಸ್ಯೆಯ ಹಗಲು ಏಕೆ ಕಪ್ಪಾಗುವುದಿಲ್ಲ?
ಹುಣ್ಣಿಮೆಯ ಹಗಲು ಬೆಳದಿಂಗಳು ಮೂಡದ ಏಕೈಕ ಕಾರಣ.

ರತ್ನಜ, ಮೈಸೂರು
ಸಾಯುವಾಗ ಯಾವ ಶಬ್ದವೂ ಬರದಿದ್ದರೂ ಢಂ ಅಂದರು ಅನ್ನುವುದೇಕೆ?
ಮೃತನ ಆಪ್ತರ ಹೃದಯದ ಬಳಿ ಕಿವಿ ಇಟ್ಟು ಕೇಳಿಸಿಕೊಳ್ಳಿ ಢಂ ಅಷ್ಟೇ ಅಲ್ಲ, ಢಮಾರೂ ಕೇಳಿಸುತ್ತದೆ.

ನಾರಾಯಣ ಯಾಜಿ, ಶಿರಾಲಿ
ಕಂಡಿದ್ದು ಸುಂದರ. ಕಾಣದ್ದು ಅತಿ ಸುಂದರ ಅಂತೆ. ನಾನಿನ್ನೂ ನಿಮ್ಮನ್ನು ನೋಡಿಲ್ಲ. ಹಾಗಾಗಿ...?
ಮಮತೆಯ ಕಣ್ಣಿಂದ ನೋಡಲು ಬನ್ನಿ. ಆಗ ಜಗವೇ ಸುಂದರ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಕಿತ್ತುಕೊಳ್ಳುವುದು ವೋಟು, ಹಂಚಿಕೊಳ್ಳುವುದು ವಿದ್ಯೆ. ಕಳ್ಳತನ?
ಓಟು ಕದಿಯುವವನ ವಿದ್ಯೆ.

## ಬಹುಮಾನಿತ ಪ್ರಶ್ನೆ

ರಮೇಶ್, ಹನುಮನಾಳು
ಮನೆಯ ಮುಂದೆ ಬೆಂಕಿ ಹಾಕಿದರೆ ಅಪಶಕುನ. ಮನೆಯ ಹಿಂದೆ ಹಾಕಿದರೆ?
ಸಮಾರಂಭ – ದೊಡ್ಡ ಅಡುಗೆಗಳಿಗೆ ಅಲ್ಲೇ ಒಲೆ ಹೂಡುವುದು.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
ರಾಮ್ ಹೆಸರಿನ ನೀವು ಬಾಣ ಬಿಡುತ್ತೀರಾ? ನಿಮ್ಮ ಹತ್ತಿರ ಬಾಣ ಇದೆಯಾ?
ನನ್ನ ಕಾರ್ಯದಲ್ಲೇ ಬಾಣ ಇದೆ. ನಾನು ಉತ್ತರಗಳ ಬಾಣಸಿಗ.

ಬಿದರಹಳ್ಳಿ ಚೆನ್ನವೀರಪ್ಪ, ಹಿರೇಹಡಗಲಿ
ಅಪ್ಪಿಕೊಂಡರೆ ಸಾಲದು, ಒಪ್ಪಿಕೊಳ್ಳಬೇಕು. ಅಪ್ಪಿಕೊಂಡವರೆಲ್ಲ ಒಪ್ಪಿಕೊಳ್ಳುವುದಿಲ್ಲ. ಏನಿದರ ಅರ್ಥ?
ಎತ್ತಿ ಕುಕ್ಕುವುದಕ್ಕೆಂದೇ ಅಪ್ಪಿಕೊಳ್ಳುವ ಡಬ್ಲ್ಯೂಡಬ್ಲ್ಯೂಎಫ್ ನಿಯಮ.

ಆರ್. ಮಧುಸೂದನ್, ಹಾಸನ
ತಲೆಕೂದಲು ಉದುರಿದೆ. ಕಪ್ಪುಕೂದಲಿನ ವಿಗ್ ಖರೀದಿಸಲೋ, ಬಿಳಿಕೂದಲಿನ ವಿಗ್ ಖರೀದಿಸಲೋ?



ಹುಬ್ಬಿಗೆ ಮ್ಯಾಚ್ ಆಗುವಂಥದ್ದನ್ನು ಖರೀದಿಸಿ.

ಬಿ.ಆರ್. ಉಷಾ, ಬೆಂಗಳೂರು
ಇಲ್ಲೊಬ್ಬರು ಸಕ್ಕರೆ ಅಚ್ಚಿನ ಬದಲು ಬೆಲ್ಲದ ಅಚ್ಚು ಕೊಡುತ್ತಾರೆ. ಏಕೆ ಗುರು?
ಜೀರಿಗೆಯೊಡನೆ ಲಗ್ನಕ್ಕೆ, ಎಳ್ಳಿನೊಡನೆ ಸವಿಮಾತಿಗೆ ಸಾಥ್ ಕೊಡುವುದು ಬೆಲ್ಲವೇ, ಸಕ್ಕರೆಯಲ್ಲವೆಂದು ತಿಳಿದವರು.

ವಿ. ಭಾಗ್ಯಲಕ್ಷ್ಮಿ, ಮೈಸೂರು
ಇತ್ತೀಚೆಗೆ ಯಾರನ್ನಾದರೂ, ಏನನ್ನಾದರೂ ಹೀಯಾಳಿಸಬೇಕಾದರೆ ಡಬ್ಬಾ ಅಂತಾರಲ್ಲ...?
ಡಬ್ಬಾ ಫಿಲ್ಮ್ ಎಂದರೆ ಜನಕ್ಕೆ ಇಷ್ಟವಾಗದೆ ಡಬ್ಬಿ ಸೇರಿತೆಂದು. ಇದೇ ಈಗ ಎಲ್ಲಕ್ಕೂ ವಿಸ್ತರಿಸಿದೆ.

■ ರಾಮ್

ಪ್ರಶ್ನೆಯನ್ನು ಕಳಿಸಲು: editorsu@sudha.co.in